# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 48/2019**
**ಪಿ.ಡಬ್ಲ್ಯೂಃ 1, ಬಸಮ್ಮ**

ದಿನಾಂಕ **02-06-2022** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.
ಪಾಟಿ ಸವಾಲು :- ಶ್ರೀ ಟಿ ವಿ ಪಿ ವಕೀಲರಿಂದ

ನನ್ನ ಮುತ್ಯಾನ ಹೆಸರು ಗುಂಡಪ್ಪ. ಗುಂಡಪ್ಪನಿಗೆ ಸೈದಪ್ಪ ಮತ್ತು ನಾಗಪ್ಪ ಎಂಬ ಇಬ್ಬರು ಮಕ್ಕಳು ಇದ್ದರು. ನಾಗಪ್ಪನಿಗೆ ಮಕ್ಕಳು ಇರಲಿಲ್ಲ. ನಾಗಪ್ಪ ಇವರು 1962 ರಲ್ಲಿಯೇ ಸೈದಪ್ಪನಿಂದ ಬೇರೆಯಾಗಿ ವಾಸಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆ ಸೈದಪ್ಪನಿಗೆ ಇಬ್ಬರು ಹೆಂದಡತಿಯರು ಎಂದರೆ ಸರಿ. ನಾಗಮ್ಮ ಮೊದಲನೇಯ ಹೆಂಡತಿ ಮಹಾದೇವಿ 2 ನೇ ಹೆಂಡತಿ ಎಂದರೆ ಸಾಕ್ಷಿಯು ಮಾಹಾದೇವಿ ಮೊದಲನೇಯ ಹೆಂಡತಿ ಎಂದು ಹೇಳುತ್ತಾರೆ. ವಾದ ಪತ್ರದ ಬಗ್ಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ನಾನು ನನ್ನ ತಾಯಿ 10 ವರ್ಷ ವಯಸ್ಸಿನವರು ಇದ್ದಾಗ ಮದುವೆಯಾಗಿರುತ್ತಾರೆ ಎಂದು ವಾದಿ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿ. ಆ ಕಾಲದಲ್ಲಿ ಸಣ್ಣ ವಯಸ್ಸಿಗೆ ಮದುವೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನಾಗಮ್ಮ ಇವರಿಗಿಂತ ಮೊದಲೇ ಮದುವೆಯಾಗಿತ್ತು ಎಂದು ತೊರಿಸಲು 10 ವರ್ಷ ಇದ್ದಾಗ ನನ್ನ ತಾಯಿಗೆ ಮದುವೆಯಾಗಿದೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. ನನ್ನ ತಾಯಿಗೆ ಯಾವಾಗ ಮದುವೆಯಾಯಿತ್ತು ಎಂದು ತೋರಿಸುವ ದಾಖಲೆ ಹಾಕಿಲ್ಲ.

ನನ್ನ ತಾಯಿಗೆ 9 ಜನ ಮಕ್ಕಳು ಅದರಲ್ಲಿ ನಾವು 4 ಜನ ಮಾತ್ರ ಉಳಿದಿದ್ದೇವೆ ಎಂದು ಪ್ರಕರಣಕೆ ಹೊಂದಿಕೊಳ್ಳು ಹಾಗೆ ಸುಳ್ಳು ಹೇಳಿ ಬರೆಸಿದ್ದೇವೆ ಅಂದರೆ ಸರಿಯಲ್ಲ. ಅದೇ ರೀತಿ ಮಹಾದೇವಿ ಇವರಿಗೆ ಹುಟ್ಟಿದ ಮಕ್ಕಳು ಸಾಯುತ್ತಿದ್ದರಿಂದ ನಾಗಮ್ಮ ಇವರನ್ನು 2 ನೇ ಮದುವೆ ಆದರು ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಆ ರೀತಿ 2 ನೇ ಮದುವೆಯಾದ ನಂತರ ನನ್ನ ತಾಯಿಗೆ ಮತ್ತೆ ಮಕ್ಕಳು ಆದವು ಎಂದು ಸುಳ್ಳು ಹೇಳಿದ್ದೇನೆ ಆದರೆ ನಾಗಮ್ಮನ ಬಗ್ಗೆ ಮೊದಲು ಮಕ್ಕಳು ಆಗಿದ್ದವು ಎಂದು ಸೂಚಿಸುವುದು ಸರಿಯಲ್ಲ. ನಾವು ಮೊದಲನೇಯ ಹೆಂಡತಿ ಮಕ್ಕಳು ಎಂದು ಹೇಳಿದರೆ ಆಸ್ತಿ ಹೆಚ್ಚಿಗೆ ಸಿಗುತ್ತದೆ ಎಂದು ಸುಳ್ಳು ಹೇಳಿ ದಾವೆ ಹಾಕಿದ್ದೇವೆ ಅಂದರೆ ಸರಿಯಲ್ಲ.

ನಾನು ಹಾಗೂ ನನ್ನ ಅಕ್ಕ ಯಾವ ವರ್ಷದಲ್ಲಿ ಹುಟ್ಟಿದ್ದೇವೆ ಎಂದು ಹೇಳಲು ಬರುವುದಿಲ್ಲ. ನನ್ನ ತಾಯಿ ಈಗಲೂ ಆರೋಗ್ಯವಾಗಿದ್ದಾರೆ. ನಮ್ಮ ಕುಂಟುಬಕ್ಕೆ ಎಷ್ಟು ಹೊಲ ಇದೆ ಅದರ ಸರ್ವೆ ನಂಬರ, ವಿಸ್ತೀರ್ಣ ಮತ್ತು ಚೆಕ್ಕು ಬಂದಿ ಹೇಳಲು ಬರುವುದಿಲ್ಲ. ಸರ್ವೆ ನಂಬರ 32/1, 6 ಎಕರೆ 13 ಗುಂಟೆ ಹಾಗೂ ಸರ್ವೆ ನಂಬರ 502, 27 ಗುಂಟೆ ಈ ಆಸ್ತಿಗಳು ಮೃತ ನಾಗಪ್ಪ ಇವರು ತಮ್ಮ ಸ್ವಂತ ಆದಾಯದಿಂದ ಖರೀದಿಸಿದ ಆಸ್ತಿ ಅಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು

**ಅಸಲು ದಾವಾ ನಂಃ 48/2019**
**ಪಿ.ಡಬ್ಲ್ಯೂಃ 1, ಬಸಮ್ಮ**

ಹೇಳುತ್ತಾರೆ. ಅದೇ ರೀತಿ ಸರ್ವೆ ನಂಬರ 49, 12 ಎಕರೆ 23 ಗುಂಟೆ ನನ್ನ ತಂದೆಯ ಸ್ವ-ಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನಾಗಪ್ಪ ಇವರಿಗೆ ಮಕ್ಕಳು ಇಲ್ಲದ ಕಾರಣ ಸರ್ವೆ ನಂಬರ 32/1 ಹಾಗೂ 502 ಇವುಗಳನ್ನು 3 ನೇ ಪ್ರತಿವಾದಿ ಈರಣ ಇವರಿಗೆ ಕೊಟ್ಟಿದ್ದರೂ ಎಂದರೆ ಸರಿಯಲ್ಲ. ಸರ್ವೆ ನಂಬರ 32/1 , 49 ಹಾಗೂ 502 ಇವು ಯಾವುದು ನಮ್ಮ ಹಿರಿಯರ ಆಸ್ತಿಗಳು ಅಲ್ಲ ಆದಕಾರಣ ನಮ್ಮಗೆ ಯಾವುದೇ ಹಕ್ಕು ಇಲ್ಲ ಅನ್ನುವುದು ಸರಿಯಲ್ಲ.

ಸರ್ವೆ ನಂಬರ 21/1 , 22/2, 514 ಇವುಗಳನ್ನು ನಮ್ಮಗೇ ಹಾಗೂ ನಮ್ಮ ತಾಯಿಗೆ ಜೀವನೋಪಯಾಕ್ಕಾಗಿ ನೀಡಿದ್ದು ನನ್ನ ತಾಯಿಯ ಹೆಸರಿಗೆ ಖಾತೆ ಇದೆ ಎಂದು ಪ್ಯಾರ ನಂ 5 ರಲ್ಲಿ ಹೇಳಿರುವುದು ಸರಿಯಿದೆ. ನಮ್ಮ ತಂದೆ ಈಗ ನಮ್ಮ ಜೋತೆ ಇರುವುದಿಲ್ಲ ಅನ್ನುವುದು ಸರಿ. ಸರ್ವೆ ನಂಬರ 21/2 5 ಎಕರೆ 32 ಗುಂಟೆ ಹಾಗೂ ಸರ್ವೆ ನಂಬರ 21/2, 5 ಎಕರೆ 35 ಗುಂಟೆ ಜಮೀನಿನನ್ನು ನನ್ನ ತಾಯಿ ಅವರಿಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಕೂಡ ಸಂತೋಷಸಿಂಗ್ ಹಾಗೂ ಭವಾನಿಭಾಯಿ ಇವರ ಹೆಸರಿಗೆ ಕ್ರ ಯಪತ್ರ ಮಾಡಿ ಪ್ರತಿವಾದಿಗಳ ಹಕ್ಕಿಗೆ ಚ್ಯುತಿ ಮಾಡಿದ್ದಾರೆ ಅಂದರೆ ಸರಿಯಲ್ಲ..

ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗಾಗಿ ವಕೀಲರು ಸಮಯ ಕೋರಿದ್ದು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ